(ಇಂದು ದಿನಾಂಕಃ 18–03–2026 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀಸವಾಲು ಃ ಶ್ರೀ ಆರ್ ಎಂ ಆರ್ ವಕೀಲರಿಂದ ಃ-

1) ಶಿಶುವಿನಹಳ್ಳಿ ಗ್ರಾಮದ ಹರಿಜನ ಓಣಿಯಲ್ಲಿ 7-8 ಹಳೆಯ ಮನೆಗಳು ಇರುತ್ತವೆ. ಸದರಿ ಓಣಿಯಲ್ಲಿ ನನ್ನ ಹೆಸರಿನಲ್ಲಿ ಆಸ್ತಿಗಳು ಇರುತ್ತದೆ. ನನ್ನ ಮನೆಯ ಸಂಖ್ಯೆ 269 ಇರುತ್ತದೆ. ನನ್ನ ಆಸ್ತಿಯ ಪಶ್ಚಿಮಕ್ಕೆ ವಗ್ಗರ ರವರ ಆಸ್ತಿ ಬರುತ್ತದೆ. ಸದರಿ ಆಸ್ತಿಯ ಸೂರ್ಯ ಹುಟ್ಟುವ ದಿಕ್ಕಿನಲ್ಲಿ ಮಲಕಪ್ಪ ಬಿಳೆವಿಳೆ ರವರ ಆಸ್ತಿ, ಉತ್ತರಕ್ಕೆ ದ್ಯಾಮವ್ವ ಕಾಳೆ ಆಸ್ತಿ, ಸಾಕ್ಷಿಯು ಮುಂದುವರೆದು ನಮ್ಮ ಮನೆಯ ಪಕ್ಕದಲ್ಲಿ ಬರುತ್ತದೆ. ದಕ್ಷಿಣಕ್ಕೆ ವಗ್ಗರ ರವರ ಆಸ್ತಿ ಬರುತ್ತದೆ.

2) ಶಿಶುವಿನಹಳ್ಳಿ ಗ್ರಾಮದ ವಿಪಿಸಿ ಸಂಖ್ಯೆ 267/ಅ ರಲ್ಲಿ ಯಾರ ಹೆಸರು ದಾಖಲಾಗಿರುತ್ತದೆ ಎಂದು ನಾನು ನೋಡಿಲ್ಲ ಕಾರಣ ನನಗೆ ಶಿಕ್ಷಣವಿರುವುದಿಲ್ಲ. ವಿಪಿಸಿ ಸಂಖ್ಯೆ 267 ರ ಪೂರ್ವಕ್ಕೆ ಸರ್ಕಾರಿ ರಸ್ತೆ, ಪಶ್ಚಿಮಕ್ಕೆ ಎಲ್ ಹೆಚ್ ಕಾಳೆ ರವರ ಆಸ್ತಿ, ಉತ್ತರಕ್ಕೆ ಸರ್ಕಾರಿ ರಸ್ತೆ, ದಕ್ಷಿಣಕ್ಕೆ ವಗ್ಗರ ರವರ ಆಸ್ತಿ ಎಂದು ನುಡಿಯುತ್ತಾರೆ. ಈ ಹಂತದಲ್ಲಿ ಸಾಕ್ಷಿಯು ನನಗೆ ದಿಕ್ಕುಗಳು ತಿಳಿಯುವುದಿಲ್ಲ ಹಿಂದೆ ಮುಂದೆ ನುಡಿಯುತ್ತೇನೆ ಎಂದು ನುಡಿಯುತ್ತಾರೆ.

3) ಚೆನ್ನವ್ವ ಕಾಳೆ ಹಾಗೂ ನಾನು ಒಂದೇ ಜಾತಿಯವರು ಎಂದರೆ ಸರಿ. ನಮ್ಮ ನಡುವೆ ಒಳ್ಳೆಯ ಒಡನಾಟವಿರುತ್ತದೆ ಎಂದರೆ ಸರಿ. ನಾವು ಪರಸ್ಪರ ಸಹಾಯ ಮಾಡುತ್ತಾ ಬಂದಿರುತ್ತೇವೆ ಎಂದರೆ ಸಾಕ್ಷಿಯು ಮಾಡಲೇಬೇಕು ಎಂದು ನುಡಿಯುತ್ತಾರೆ. ನನಗೆ ದಾವೆಯ ಬಗ್ಗೆ ಹಾಗೂ ದಾವಾ ಆಸ್ತಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರು ಸಹ ಪ್ರತಿವಾದಿಗೆ ಸಹಾಯ ಮಾಡಲು ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲಾ.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**